ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ.:ಸಿ7[2]ಪ್ರಾಶಿಅ:ಡೈಸ್.ವಿಲೀನ-06/2020-21 ದಿನಾಂಕ:07-02-2022

**: : ಸುತ್ತೋಲೆ : :**

ವಿಷಯ: ಒಂದೇ ಆಡಳಿತ ಮಂಡಳಿಯಿಂದ ಒಂದೇ ಆವರಣದಲ್ಲಿ ನಡೆಯುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಕೇಂದ್ರ ಪಠ್ಯಕ್ರಮ ಶಾಲೆಗಳಿಗೆ ಬೇರೆ ಬೇರೆ ಹೆಸರಿನ ಶಾಲೆಯಾಗಿ ನೋಂದಣಿ ಮಾಡಿದ್ದು, ಅವುಗಳನ್ನು ವಿಲೀನಗೊಳಿಸಿ ಒಂದೇ ಶಾಲೆಯ ಹೆಸರಿನಲ್ಲಿ ಪರಿಷ್ಕೃತ ನೋಂದಣಿ ಮಾಡಿ, ಒಂದೇ ಡೈಸ್ ಕೋಡ್ ನೀಡುವುದಕ್ಕೆ ಕ್ರಮವಹಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ಶಿಕ್ಷಣ ಕಾಯ್ದೆ-1983, ಸೆಕ್ಷನ್-6[ಎ]-2018

2] ಸರ್ಕಾರದ ಪತ್ರ ಸಂಖ್ಯೆ:ಇಡಿ 92 ಪಿಜಿಸಿ 2020, ದಿನಾಂಕ:02-03-2021.

3] ಸರ್ಕಾರದ ಪತ್ರ ಸಂಖ್ಯೆ:ಇಪಿ:425:ಪಿಜಿಸಿ:2021, ದಿನಾಂಕ:03-01-2022.

4] ಈ ಕಛೇರಿ ಪತ್ರ ಸಂಖ್ಯೆ:ಸಿ7[3]ಪ್ರಾಶಿಅ:ಖಾ.ಶಾ.ಮಾ.ನ:01:2021-22, ದಿನಾಂಕ:05.01.2022.

5] ಈ ಕಛೇರಿ ಪತ್ರದ ಸಂಖ್ಯೆ:ಸಿ7(2)ಪ್ರಾಶಿಅ:ಡೈಸ್ ವಿಲೀನ-06/2020-21, ದಿನಾಂಕ:20-01-2022

* * * * *

ಮೇಲಿನ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸದಂತೆ ಉಲ್ಲೇಖ [5] ರಲ್ಲಿ ಒಂದೇ ಆಡಳಿತ ಮಂಡಳಿಯಿಂದ ಒಂದೇ ಆವರಣದಲ್ಲಿ ನಡೆಯುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಕೇಂದ್ರ ಪಠ್ಯಕ್ರಮ ಶಾಲೆಗಳು ಬೇರೆ ಬೇರೆ ಹೆಸರಿನ ಶಾಲೆಯಾಗಿ ನೋಂದಣಿ ಮಾಡಿದ್ದು, ಅವುಗಳನ್ನು ವಿಲೀನಗೊಳಿಸಿ ಒಂದೇ ಶಾಲೆಯ ಹೆಸರಿನಲ್ಲಿ ಪರಿಷ್ಕೃತ ನೋಂದಣಿ ನೀಡಿ, ಒಂದೇ ಡೈಸ್ ಕೋಡ್ ನೀಡುವ ಸಂಬಂಧ ಈ ಕಛೇರಿಯಿಂದ ಸುತ್ತೋಲೆಯನ್ನು ಹೊರಡಿಸಲಾಗಿತ್ತು.

ಮುಂದುವರೆದು, ಸದರಿ ಸುತ್ತೋಲೆಯಲ್ಲಿ ತಂತ್ರಾಂಶವು ಬಿಡುಗಡೆಯಾದ ನಂತರ ಕ್ರಮವಹಿಸುವಂತೆಯೂ ಸಹ ತಿಳಿಸಲಾಗಿತ್ತು. ಈ ಮಧ್ಯೆ ಅನೇಕ ಉಪನಿರ್ದೇಶಕರು ಹಾಗೂ ಶಾಲೆಗಳ ಆಡಳಿತ ಮಂಡಳಿಗಳು ಪರಿಷ್ಕೃತ ನೋಂದಣಿ ನಂತರ ಒಂದೇ ಡೈಸ್ ಕೋಡ್ ಪಡೆದು ಮಾನ್ಯತೆ ನವೀಕರಣಗೊಳಿಸಿ ಎಸ್‌ಎಸ್‌ಎಲ್.ಸಿ ಮಕ್ಕಳ ಪರೀಕ್ಷೆಗೆ ಶಾಲಾ ಕೋಡ್ ಸಂಖ್ಯೆ ಪಡೆಯಲು ಹಾಗೂ

ಆರ್.ಟಿ.ಇ ಶುಲ್ಕ ಮರುಪಾವತಿಗೆ ಸದರಿ ಡೈಸ್ ಕೋಡ್ ವಿಲೀನ ಪ್ರಕ್ರಿಯೆ ಮಾಡುವುದರಿಂದ ವಿಳಂಬವಾಗಿ ತೊಂದರೆಯಾಗುತ್ತಿರುವುದಾಗಿ ತಿಳಿಸಿರುತ್ತಾರೆ.

ಆದರೆ ಪರಿಷ್ಕೃತ ನೋಂದಣಿ ಪ್ರಮಾಣ ಪತ್ರ ಮತ್ತು ಡೈಸ್ ಕೋಡ್ ವಿಲೀನದ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು ಅನುಷ್ಠಾನಕ್ಕೆ ಕಾಲಾವಕಾಶ ಬೇಕಾಗಿರುತ್ತದೆ.. ಪ್ರಯುಕ್ತ ಶೈಕ್ಷಣಿಕ ವರ್ಷದಲ್ಲಿ ಬಿಡುಗಡೆಯಾಗಿರುವ ಆರ್.ಟಿ.ಇ ಶುಲ್ಕ ಮರುಪಾವತಿ ಮೊತ್ತವನ್ನು ಆರ್ಥಿಕ ವರ್ಷ ಮುಕ್ತಾಯಗೊಳ್ಳುವ ಮುಂಚಿತವಾಗಿ ಬಳಕೆ ಮಾಡಬೇಕಾಗಿರುವುದರಿಂದ ಮತ್ತು ಪರೀಕ್ಷೆಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ಹಿಂದೆ ಡೈಸ್ ಕೋಡ್ ವಿಲೀನವನ್ನು ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ, ಆರ್.ಟಿ.ಇ ಶಾಖೆಯಲ್ಲಿ ಮಾಡುತ್ತಿದ್ದ ಪದ್ಧತಿಯಂತೆಯೇ ಮುಂದುವರೆಸಿ, ದಿನಾಂಕ:31-03-2022 ರೊಳಗೆ ಪೂರ್ಣಗೊಳಿಸಲು ಅನುಮತಿಸಿದೆ. ದಿನಾಂಕ:01-04-2022ರ ನಂತರ ಪರಿಷ್ಕೃತ ನೋಂದಣಿ ಪ್ರಮಾಣ ಪತ್ರ ಮತ್ತು ಡೈಸ್ ಕೋಡ್ ವಿಲೀನದ ಪ್ರಕ್ರಿಯೆಯನ್ನು ಆನ್ ಲೈನ್ ತಂತ್ರಾಂಶದ ಮೂಲಕವೇ ನಿರ್ವಹಿಸತಕ್ಕದ್ದು. ಈ ಕುರಿತು ತಂತ್ರಾಂಶ ಬಿಡುಗಡೆ ಮಾಡಿ ವಿಡಿಯೋ ಸಂವಾದದ ಮೂಲಕ ಮಾರ್ಗದರ್ಶನ ನೀಡಲಾಗುವುದು.

ಆಯುಕ್ತರು, 11/02/2022.

ಸಾರ್ವಜನಿಕ ಶಿಕ್ಷಣ ಇಲಾಖೆ

*ಇವರಿಗೆ:*

01. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ.
02. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ. [ಇವರು ಎಲ್ಲಾ ಖಾಸಗಿ ಅನುದಾನಿತ / ಅನುದಾನ ರಹಿತ ಆಡಳಿತ ಮಂಡಳಿ ಹಾಗೂ ಶಾಲಾ ಮುಖ್ಯಸ್ಥರಿಗೆ ಸುತ್ತೋಲೆಗಳನ್ನು ತಲುಪಿಸುವುದು.]

*ಪ್ರತಿಯನ್ನು ಮಾಹಿತಿಗಾಗಿ:*

03. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ವಿಭಾಗ.
04. ಹಿರಿಯ ಸಹಾಯಕ ನಿರ್ದೇಶಕರು, / ಕಾರ್ಯಕ್ರಮಾಧಿಕಾರಿ, ಎಸ್.ಎ.ಟಿ.ಎಸ್ ವಿಭಾಗ, ಸಮಗ್ರ ಶಿಕ್ಷಣ, ಬೆಂಗಳೂರು. ಈ ಬಗ್ಗೆ ತಂತ್ರಾಂಶದಲ್ಲಿ ಅಗತ್ಯ ತಿದ್ದುಪಡಿಗಳನ್ನು ತರುವುದು.
05. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಇವರಿಗೆ ಕಳುಹಿಸುತ್ತಾ, ಈ ಸುತ್ತೋಲೆಯನ್ನು ಇಲಾಖಾ ವೆಬ್ ಸೈಟ್ ನ ಸಾಮಾನ್ಯ ಸುತ್ತೋಲೆಯಲ್ಲಿ ಪ್ರಕಟಿಸುವುದು.
06. ಕಛೇರಿ ಪ್ರತಿ.